**<u>ದಿನಾಂಕಃ 09–02–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎನ್.ಬಿ.ಬಿ. ವಕೀಲರಿಂದ 5 ನೇ ಪ್ರತಿವಾದಿ ಪರಃ</u>**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಹೇಮನಗೌಡ ತಂದೆ ಬಸವನಗೌಡ ಪಾಟೀಲ ನನಗೆ ಅಜ್ಜ ಆಗಬೇಕು. ನಮ್ಮ ಅಜ್ಜನಿಗೆ ನಮ್ಮ ತಂದೆ ಶಿವನಗೌಡ ಮತ್ತು ಬಸನಗೌಡ ಎಂಬ ಮಕ್ಕಳು ಇರುತ್ತಾರೆ. ನಮ್ಮ ಹೆಣ್ಣು ಮಕ್ಕಳಿಗೆ ಇರುವುದಿಲ್ಲ. ನನ್ನ ಅಜ್ಜನಿಗೆ ಸರ್ವೆ ನಂ , 26/1 ಮತ್ತು 36 ರ ಜಮೀನು ಮಾತ್ರ ಇದ್ದವು ಎಂದರೆ ಸರಿಯಲ್ಲ ಈ ಎರಡೂ ಸರ್ವೆ ನಂಬರಿನಲ್ಲಿ ಆಸ್ತಿ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಆಸ್ತಿಯಲ್ಲಿ ಸರ್ವೆ ನಂ. 26/1 ಮತ್ತು 36 ರ ಆಸ್ತಿಯನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿಗಳು ನನ್ನ ಅಜ್ಜನಿಗೆ ಸರ್ಕಾರದಿಂದ ಮಂಜೂರಾದ ಆಸ್ತಿಗಳು ಎಂದರೆ ಸರಿಯಲ್ಲ. ಈ ಆಸ್ತಿ ಅಲ್ಲದೇ ಗ್ರಾಮ ಪಂಚಾಯತಿ ವ್ಯಾಪ್ತಿಯ 5 ಆಸ್ತಿಗಳು ನನ್ನ ಅಜ್ಜನ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ ಗೌರಮ್ಮ ಮದುವೆ ಆದನಂತರ ಮೃತಪಟ್ಟಿರುತ್ತಾರೆ. ನನ್ನ ಅಜ್ಜ ತೀರಿಕೊಂಡ ನಂತರ ನನ್ನ ತಂದೆ ಮತ್ತು ದೊಡ್ಡಪ್ಪ ಪಂಚಾಯತಿ ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡರು ಎಂದರೆ ಸರಿಯಲ್ಲ. ಆ ಪ್ರಕಾರ ಗ್ರಾಮ ಪಂಚಾಯತಿ ಸಂಖ್ಯೆ 83 ಮತ್ತು 85 ಆಸ್ತಿಗಳು ನನ್ನ ದೊಡ್ಡಪ್ಪನ ಮಗ ಸಿದ್ದನಗೌಡನಿಗೆ ಬಂದವು ಎಂದರೆ ಸರಿಯಲ್ಲ. ಆಸ್ತಿ ನಂ. 160 ಸಿದ್ದನಗೌಡ ಮತ್ತು ಬಸನಗೌಡನಿಗೆ ಸಾಮೂಹಿಕವಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿ ಆಸ್ತಿ ನಂ. 170 ಮತ್ತು 177 ಹೇಮನಗೌಡ, ಸಿದ್ದನಗೌಡ ಪಾಟೀಲಗೆ ಸಾಮೂಹಿಕವಾಗಿ ಬಂದಿದೆ ಎಂದರೆ ಸರಿಯಲ್ಲ. 1970 ರ ಪೂರ್ವದಲ್ಲಿಯೇ ಈ ಆಸ್ತಿಗಳು ಆಗಿದ್ದರೂ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸುವಾಗ ಶಿವನಗೌಡ ಜೀವಿತವಾಗಿದ್ದರು ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿ ವಿಭಾಗ ಆದನಂತರ ನನ್ನ ತಂದೆ ಸರ್ವೆ ನಂ. 10/1 ಬ 04 ಎಕರೆ

ಆಸ್ತಿಯನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಕೂಡಿ ಇದ್ದಾಗ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ಪ್ರಕಾರ ಹಿರೇನಂದಿಹಳ್ಳಿ ಗ್ರಾಮದ ಡ-493 ನನ್ನ ತಂದೆಯ ಹೆಸರಿಗೆ ಜಾರಿ ಇದೆ ಎಂದರೆ ಸರಿಯಲ್ಲ. ಹಿಸ್ಸೆ ಆದನಂತರ ಬಸನಗೌಡ ಪಾಟೀಲರವರು ಸರ್ವೆ ನಂ. 10ಎ ದಲ್ಲಿ ಆಸ್ತಿಯನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಡ-474 ಜಾರಿಯಲ್ಲಿದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪರವರು ಬೇರೆಯಾದ ನಂತರ ಸ್ವಯಾರ್ಜಿತವಾಗಿ ಆಸ್ತಿ ಗಳಿಸಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.